(ಅ) ನೇತ್ರಾವತಿ ನದಿಯಿಂದ ತುಮಕೂರು ಜಿಲ್ಲೆಗೆ ನೀರು ಒದಗಿಸುವ ಯಾವುದಾದರೂ ಸಲಹೆ ಸರ್ಕಾರದವರ ಮುಂದಿದೆಯೇ ;

(ಆ) ಹಾಗಿದ್ದರೆ, ನೇತ್ರಾವತಿ ನದಿಯ ನೀರಿನಿಂದ ಉಪಯೋಗ ಪಡೆಯುವ ತಾಲ್ಲೂಕುಗಳ ಸಂಖ್ಯೆ ಎಷ್ಟು ;

(ಇ) ಪ್ರತಿ ತಾಲ್ಲೂಕಿನಲ್ಲಿ ಉಪಯೋಗ ಪಡೆಯುವ ಪ್ರದೇಶಗಳ ವಿಸ್ತೀರ್ಣ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

(ಅ) ಇಲ್ಲ.

(ಆ) ಮೇಲೆ 'ಅ'ನಲ್ಲಿ ನೀಡಿದ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಮೇಲೆ 'ಅ'ನಲ್ಲಿ ನೀಡಿದ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಕರ್ನಾಟಕದ ವಿವಿಧ ತಾಲ್ಲೂಕುಗಳಲ್ಲಿ ಕೈಗಾರಿಕಾ ಶೆಡ್ಡುಗಳನ್ನು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಂಚಿರುವ ಬಗ್ಗೆ.

ಪ್ರ. 147 (131) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕರ್ನಾಟಕದ ವಿವಿಧ ತಾಲ್ಲೂಕುಗಳಲ್ಲಿ ಎಷ್ಟು ಕೈಗಾರಿಕಾ ಕಟ್ಟಡಗಳನ್ನು ಕಟ್ಟಲಾಗಿದೆ ಮತ್ತು ಹಂಚಿಕೆಯಾಗಿದೆ (ತಾಲ್ಲೂಕುವಾರು ವಿವರಗಳನ್ನು ಕೊಡುವುದು) ;

(ಆ) ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಸಣ್ಣ ಪ್ರಮಾಣದ ಉದ್ಯಮಿಗಳಿಗೆ ಕೊಟ್ಟಿರುವ ಅನುಕೂಲತೆಗಳೇನು ;

(ಇ) ಕೈಗಾರಿಕೆಯನ್ನು ಸ್ಥಾಪಿಸಲು ಇರುವ ಅನಾನುಕೂಲತೆಗಳ ಬಗ್ಗೆ ಸಣ್ಣ ಪ್ರಮಾಣದ ಕೈಗಾರಿ ಕೋದ್ಯಮಿಗಳಿಂದ ದೂರುಗಳು ಬಂದಿವೆಯೇ ;

(ಈ) ಹಾಗಿದ್ದಲ್ಲಿ, ಈ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) 2188. ವಿವರ ಪಟ್ಟಿಯನ್ನು ಲಗತ್ತಿಸಲಾಗಿದೆ.

(ಆ) ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ರಸ್ತೆ, ದಾರದೀಪಗಳು, ಚರಂಡಿ ವ್ಯವಸ್ಥೆ, ನೀರು ಸರಬರಾಜು, ಬ್ಯಾಂಕಿಂಗ್ ಮತ್ತು ಅಂಚೆಕಛೇರಿಗಳನ್ನೆ ಕೈಗಾರಿಕಾ ವಸಾಹತುಗಳಲ್ಲಿ ಒದಗಿಸಲಾಗಿದೆ.

(ಇ) ಹೌದು. ಹೊಸದಾಗಿ ನಿರ್ಮಿಸಿರುವ ಕೈಗಾರಿಕಾ ವಸಾಹತುಗಳಿಂದ ಬಂದಿವೆ.

(ಈ) ಅನಾನುಕೂಲತೆಗಳ ಬಗ್ಗೆ ದೂರುಗಳು ಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 131 ರ

(ಅ) ಉತ್ತರದ ಅನುಬಂಧ

ಕ್ರಮ ಸಂ.	ಜಿಲ್ಲೆಗಳು	ಶೆಡ್ಡುಗಳನ್ನು ಕಟ್ಟಿ ವಿತರಣೆ ಮಾಡಿರುವುದು
1.	ಬೆಂಗಳೂರು	1084
2.	ಕೋಲಾರ	28
3.	ತುಮಕೂರು	28
4.	ಮಂಡ್ಯ	10
5.	ಮೈಸೂರು	238
6.	ಹಾಸನ	18
7.	ಕೊಡಗು	10
8.	ಶಿವಮೊಗ್ಗ	54
9.	ಚಿಕ್ಕಮಗಳೂರು	16
10.	ದಕ್ಷಿಣ ಕನ್ನಡ	173
11.	ಚಿತ್ರದುರ್ಗ	75
12.	ಧಾರವಾಡ	210
13.	ಉತ್ತರ ಕನ್ನಡ	34
14.	ಬೆಳಗಾಂ	74
15.	ಗುಲ್ಬರ್ಗಾ	40
16.	ರಾಯಚೂರು	18
17.	ಬಿಜಾಪುರ	34
18.	ಬಳ್ಳಾರಿ	22
19.	ಬೀದರ್	22
	ಒಟ್ಟು	2188